ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 248/2020

(ಫ್ರಾಸಾ-4 ಚಾಸಾ43)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 21.07.2025

| | | |
|---|---|---|
| ಸಾಕ್ಷಿದಾರರ ಹೆಸರು | - | ಮುನಿಯಪ್ಪ |
| ತಂದೆಯ ಹೆಸರು | - | ಚಿಕ್ಕಮುನಿಯಪ್ಪ |
| ವಯಸ್ಸು | - | 40 ವರ್ಷ, |
| ಉದ್ಯೋಗ | - | ಕೂಲಿ ಕೆಲಸ |
| ವಾಸ | - | ಬಿಸುವನಹಳ್ಳಿ, ದೊಡ್ಡಬಳ್ಳಾಪುರ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ಮತ್ತು 2 ಗೊತ್ತು. ಚಾಸಾ-1 ಮತ್ತು 2 ಪರಿಶಿಷ್ಟ ಜಾತಿಗೆ ಸೇರಿದವರು. ಆರೋಪಿತರು ಗೊತ್ತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿತರು ಗೌಡ ಜಾತಿಗೆ ಸೇರಿದವರು.

2. ದಿಃ01.05.2020 ರಂದು ಸಂಜೆ ಸುಮಾರು 04.00-04.15 ಘಂಟೆ ಸಮಯದಲ್ಲಿ ಚಾಸಾ-2 ಇವರ ಜಮೀನಿನಲ್ಲಿ 1 ಹಾಗೂ 2 ನೇ ಆರೋಪಿತರು ಹಾಗೂ ಅವರ ಮಕ್ಕಳಾದ ಗಿರೀಶ್ ಮತ್ತು ನವೀನ್ ಹಾಗೂ ಚಾಸಾ-1 ಮತ್ತು 2 ಇದ್ದರು. ನಮ್ಮ ಜಮೀನು ಸದರಿ ಜಮೀನಿನ ಪಕ್ಕದಲ್ಲಿ ಇರುತ್ತದೆ. ಸದರಿ ಜಮೀನಿನಲ್ಲಿ ಚಾಸಾ-1 ಮತ್ತು 2 ಹಾಗೂ 1 ಮತ್ತು 2 ನೇ ಆರೋಪಿತರ ನಡುವೆ ದುಡ್ಡು ಕಾಸಿನ ವಿಚಾರವಾಗಿ ಗಲಾಟೆ ನಡೆಯುತ್ತಿತ್ತು. ಆರೋಪಿತರು ದುಡ್ಡು ಕೊಡು ಎಂದು ಹೇಳಿದಾಗ ಎಲ್ಲಾ ಕೊಟ್ಟಿದ್ದೇನೆ ಎಂದು ಚಾಸಾ-2 ರವರು ಹೇಳಿದ್ದರು.

3. 1 ಮತ್ತು 2 ನೇ ಆರೋಪಿತರು ಹಾಗೂ ನವೀನ್ ಮತ್ತು ಗಿರೀಶ ಇವರು ಚಾಸಾ-2 ಇವರಿಗೆ ಹೊಡೆದರು ಹಾಗೂ ಗಿರೀಶ್ ಇವರು ಇಟ್ಟಿಗೆ ತೆಗೆದುಕೊಂಡು ಚಾಸಾ-2 ರವರಿಗೆ ಹೊಡೆದರು. ಗಿರೀಶ್ ಇವರು ಚಾಸಾ-2 ರವರಿಗೆ ಹೊಡೆದಂತಹ ಇಟ್ಟಿಗೆ ನೋಡಿದರೆ ಗುರುತಿಸಬಲ್ಲೆ. ಅದನ್ನು ಹೊರತು ಆರೋಪಿತರು ಬೇರೆ ಏನನ್ನೂ ಹೇಳಲಿಲ್ಲ ಹಾಗೂ ಬೇರೆನೂ ಮಾಡಿರುವುದಿಲ್ಲ. ಈಗ ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ-1 ಇಟ್ಟಿಗೆಯನ್ನು ನೋಡಿ ಗುರುತಿಸಿರುತ್ತಾರೆ. ಗಲಾಟೆ ಸಮಯದಲ್ಲಿ ಗ್ರಾಮಸ್ಥರು ಸ್ಥಳದಲ್ಲಿ ಇದ್ದರು. ನಂತರ ಚಾಸಾ-2 ರವರು ಆಸ್ಪತ್ರೆಗೆ ಹೋಗಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರು ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕೋಶ ಕೋರಿದ್ದು ಮುಂದೂಡಲಾಯಿತು)

(ಸಾಕ್ಷಿ ಹೇಳಿದಂತೆ ಹೇಳಿಕೆಯನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು